# ತಹಶೀಲ್ದಾರರು ಬಳ್ಳಾರಿ ರವರ ನ್ಯಾಯಾಲಯದ ನಡವಳಿಗಳು

| ವಾದಿಗಳು: | ಪ್ರತಿವಾದಿಗಳು: |
|---|---|
| 1)ಶ್ರೀಮತಿ ಎನ್.ಮಧುಮಯಿ ಗಂಡ ಎನ್ ಕಿಶೋರ್ ಬಾಬು<br>2)ಶ್ರೀದೇವರಾಜ ತಂದೆ ಅಡಿವೆಪ್ಪ | ಕಂದಾಯ ನಿರೀಕ್ಷಕರು, ಬಳ್ಳಾರಿ |

**ವಿಷಯ:**-ಬಳ್ಳಾರಿ ತಾಲೂಕು ಬಳ್ಳಾರಿ ಹೋಬಳಿಯ ಬೆಳಗಲ್ಲು ಗ್ರಾಮದ ಸರ್ವೆ ನಂ:544/ಎ1 ವಿಸ್ತೀರ್ಣ:4.85 ಎಕರೆ ಜಮೀನಿಗೆ ಸಂಬಂಧಿಸಿದಂತೆ ವಿಚಾರಣೆ ಕುರಿತು.

*******

ಪ್ರಸ್ತಾವನೆ:

ಮೇಲಿನ ವಿಷಯಕ್ಕೆ ಸಂಬಂಧಿಸಿಂದತೆ ಬಳ್ಳಾರಿ ತಾಲೂಕು ಬಳ್ಳಾರಿ ಹೋಬಳಿಯ ಬೆಳಗಲ್ಲು ಗ್ರಾಮದ ಸರ್ವೆ ನಂ:544/ಎ1 ವಿಸ್ತೀರ್ಣ:4.85 ಎಕರೆ ಜಮೀನಿನ ಹಾಲಿ ಭೂಮಾಲಿಕರಾದ ಇ.ಹನುಮಕ್ಕ ಗಂಡ ಅಡಿವೆಪ್ಪ ಇವರು ಉಪನೊಂಣೆ ಅಧಿಕಾರಿಗಳು, ಬಳ್ಳಾರಿ ಇವರ ಕ್ರಯ ಪತ್ರ ಸಂಖ್ಯೆBLY-1-05430-2013-14 ದಿನಾಂಕ:16-08-2013ರ ಪ್ರಕಾರ ಶ್ರೀಮತಿ ಎನ್.ಮಧುಮಯಿ ಗಂಡ ಎನ್ ಕಿಶೋರ್ ಬಾಬು ಇವರಿಗೆ ಖರೀದಿಗೆ ಮಾರಟ ಮಾಡಿರುತ್ತಾರೆ. ಅದರಂತೆ ಖರೀದಿದಾರರು ಹಕ್ಕು ಬದಲಾವಣೆ ಮಾಡಲು ಮನವಿಯನ್ನು ಸಲ್ಲಿಸಿರುತ್ತಾರೆ. ಅರ್ಜಿದಾರರ ಮನವಿಯಂತೆ ಕಂದಾಯ ನಿರೀಕ್ಷಕರು, ಬಳ್ಳಾರಿ ಇವರು ಗ್ರಾಮದಲ್ಲಿ ನಮೂನೆ-21ನ್ನು ಪ್ರಚಾರಪಡಿಸಲಾಗಿ ನಿಗದಿತ ಅವದಿಯಲ್ಲಿ ಯಾವುದೇ ಆಕ್ಷೇಪಣೆಗಳು ಬಂದಿರುವುದಿಲ್ಲ ಆದರೆ ಭೂಮಾಲಿಕರ ಮರಣ ಸಮರ್ಥನ ಪತ್ರ ಸಲ್ಲಿಸಿರುವುದಿಲ್ಲ ಮತ್ತು ಜನರಲ್ ಪವರ್ ಆಫ್ ಅಟಾರ್ನಿ ಅಧಿಕಾರ ನೀಡಿರುವ ಬಗ್ಗೆ ದಾಖಲೆಗಳನ್ನು ಸಲ್ಲಿಸದ ಕಾರಣ ಕಂದಾಯ ನಿರೀಕ್ಷಕರು, ಬಳ್ಳಾರಿ ಸದ್ರಿ ಹಕ್ಕು ಬದಲಾವಣೆ ಕಡತವನ್ನು ತಿರಸ್ಕರಿಸಿ ಇತ್ಯರ್ಥ ಪಡಿಸಲು ಕಾರ್ಯಾಲಯಕ್ಕೆ ಸಲ್ಲಿಸಿರುತ್ತಾರೆ.

ಈ ಪ್ರಕರಣವನ್ನು ಇತ್ಯರ್ಥ ಪಡಿಸಲು ದಿನಾಂಕ:04-04-2016 ಮತ್ತು16-05-2016 ರಂದು ವಿಚಾರಣೆ ನಡೆಸಲಾಗಿ ಖರೀದಿದಾರರು ಪ್ರಕರಣಕ್ಕೆ ಹಾಜರಾಗಿ ಹಾಲಿ ಭೂಮಾಲಿಕರ ಮರಣ ಸಮರ್ಥನ ಪತ್ರ ಮತ್ತು ಜನರಲ್ ಪವರ್ ಆಫ್ ಅಟಾರ್ನಿ ಅಧಿಕಾರ ನೀಡಿರುವ ಬಗ್ಗೆ ದಾಖಲೆಗಳನ್ನು ಸಲ್ಲಿಸಿರುತ್ತಾರೆ. ಕಾರಣ ಈ ಕೆಳಗಿನಂತೆ ಆದೇಶ.

-::ಆದೇಶ::-

**ಸಂ/ಕಂ/ವಿವಾದ/92/2016-17** **ದಿನಾಂಕ: 27/6/2016**

ಪ್ರಸ್ತಾವನೆಯಲ್ಲಿ ವಿವರಿಸಿದಂತೆ ಬಳ್ಳಾರಿ ತಾಲೂಕು ಬಳ್ಳಾರಿ ಹೋಬಳಿಯ ಬೆಳಗಲ್ಲು ಗ್ರಾಮದ ಸರ್ವೆ ನಂ:544/ಎ1 ವಿಸ್ತೀರ್ಣ:4.85 ಎಕರೆ ಜಮೀನನ್ನು ಉಪನೊಂಣೆ ಅಧಿಕಾರಿಗಳು, ಬಳ್ಳಾರಿ ಇವರ ಕ್ರಯ ಪತ್ರ ಸಂಖ್ಯೆBLY-1-05430-2013-14 ದಿನಾಂಕ:16-08-2013ರ ಪ್ರಕಾರ ಶ್ರೀಮತಿ ಎನ್.ಮಧುಮಯಿ ಗಂಡ ಎನ್ ಕಿಶೋರ್ ಬಾಬು ಇವರ ಹೆಸರಿಗೆ ಹಕ್ಕು ಬದಲಾವಣೆ ಮಾಡಲು ಆದೇಶಿಸಲಾಗಿದೆ.

ಈ ಆದೇಶವು ಇಂದು ದಿನಾಂಕ: 27.6.2016ರಂದು ನ್ಯಾಯಾಲಯದಲ್ಲಿ ಘೋಷಿಸಲಾಯಿತು.

ತಹಶೀಲ್ದಾರರು
ಬಳ್ಳಾರಿ
ತಹಶೀಲ್ದಾರರು, ಬಳ್ಳಾರಿ
Tasildar, Bellary.

1/7/16
ರವಾನಿಸಲಾಗಿದೆ.

ಪ್ರತಿಯನ್ನು:
1.ವಾದಿಗಳು
2.ಶಿರಸ್ತೇದಾರರು ಭೂಮಿ ಗಣಿಕೀಕರಣ ಕೇಂದ್ರ ಶಾಖೆಗೆ ಸೂಕ್ತ ಕ್ರಮಕ್ಕಾಗಿ.
3.ಆದೇಶದ ಕಡತಕ್ಕೆ